ಗುರು ಕಾಣಿಕೆಯಾಗಿ ಸಲ್ಲಿಸಿದ್ದನಂತೆ. ವೇದವತಿ ಕಳೆದ ಎರಡೂವರೆ ವರ್ಷಗಳಿಂದ ಆಗಾಗ ಈ ಕುರ್ಚಿಯ ಮ್ಯಾಲೆ ಕೂಡುತ್ತಿದ್ದಳು. ಕೆಲಸದ ಒತ್ತಡ, ಯಾವುದಕ್ಕೋ ಬೇಸರ, ಸಿಟ್ಟು ಮಾಡಿಕೊಂಡು ಮನೆಗೆ ಬಂದು ಚಹ ಕುಡಿಯುತ್ತ ಈ ಕುರ್ಚಿಯಲ್ಲಿ ಕುಂತರೆ ಸಾಕು ದುಗುಡ ಮಾಯವಾಗುತ್ತಿತ್ತು. ಸ್ವಅನುಭವದಿಂದ ನಂಬಿಕೆಯಿರಿಸಿಕೊಂಡಿದ್ದಳು. ಆದರೆ, ಅಪ್ಪನಾಗಲಿ, ಅಮ್ಮನಾಗಲಿ ಒಬ್ಬರಾದರೂ ಉಳಿದು ತನ್ನ ಜತೆಗಿದ್ದಿದ್ದರೆ ನೆಮ್ಮದಿ ತನ್ನಲ್ಲಿ ನೆಲೆಗೊಳ್ಳುತ್ತಿತ್ತು.

ವೇದವತಿಗೆ ಅಚ್ಚರಿಯೆಂದರೆ, ಅಪ್ಪನೂ ಇದೇ ಕುರ್ಚಿಯ ಮ್ಯಾಲೆ ಕುಂತು ಆಗಾಗ ಕಾಲ ಕಳೆಯುತ್ತಿದ್ದರೂ ಸಿಡಿಮಿಡಿ, ಚಡಪಡಿಕೆ, ನಿಷ್ಠುರತೆ ಯಾವುವೂ ಕಮ್ಮಿಯಾಗಿದ್ದಂತೆ ಕಾಣಲಿಲ್ಲ. 'ಆ ಕುರ್ಚಿ ಮ್ಯಾಗ ಕುಂತಾಗ ತಟಗು ನಿರುಮ್ಮಳವಾಗಿ ಇರ್ತಿದ್ದನವ್ವ ನಿಮ್ಮಪ್ಪ! ಕುರ್ಚಿ ತಂದು ಕೊಟ್ಟಾತಗ ಪುಣ್ಯ ಬರ್ಲಿ' ಎಂದು ಅಮ್ಮ ಒಮ್ಮೆ ಅಂದದ್ದು ನೆನಪಾಯ್ತು. ಇಷ್ಟಾಗಿಯೂ ವೇದವತಿ ಅಪ್ಪ-ಅಮ್ಮನ ಜತೆಗೆ ಕಳೆದ ಹದಿನೈದು ವರ್ಷಗಳಿಂದ ಇರಲಿಲ್ಲ. ಒಂದೇ ಊರಲ್ಲಿದ್ದರೂ ಮನೆಗಳು ಬೇರೆ ಬೇರೆ. ಆಗಾಗ ಬಂದು ಮಾತಾಡಿಸಿ ಉಂಡು ತಿಂದು ಹೋಗುವುದಿತ್ತು. ಮೂರು ನಾಕು ವರ್ಷಗಳ ಹಿಂದೆ ಅಮ್ಮ ತೀರಿಕೊಂಡಾಗ ಅಪ್ಪ ಒಂಟಿಯಾದರು. ಅಪ್ಪ ಅಮ್ಮನನ್ನು ವಿಶೇಷ ಕಾಳಜಿಯಿಂದ ನೋಡಿಕೊಳ್ಳದಿದ್ದರೂ ಅಮ್ಮನಿಗೆ ಯಾವುದಕ್ಕೂ ಅಡ್ಡಿ ಮಾಡುತ್ತಿರಲಿಲ್ಲ. ಅಮ್ಮನಿಗೆ ಉಡುವ-ತೊಡುವ ಚಿಂತೆಯೇ ಇರಲಿಲ್ಲ. ಸಂಪ್ರದಾಯದ ರೀತಿಯಲ್ಲಿ ಅಡುಗೆ ಮಾಡಿ ಅಪ್ಪನಿಗೆ ಉಣ್ಣಿಸುವುದು, ತಾನುಂಡು ಕಾಲ ನೂಕುವುದು. ಮನೆಯಲ್ಲಿ ಟೀವಿ ಇದ್ದರೂ ಅದನ್ನು ನೋಡುವ ಗೊಡವೆಗೆ ಹೋಗುತ್ತಿರಲಿಲ್ಲ. ಅಕ್ಕ-ಪಕ್ಕದ ಮನೆ ಮಹಿಳೆಯರ ಜತೆ ಮಾತುಕತೆ ಆಡುವುದಿಟ್ಟುಕೊಂಡಿದ್ದಳು. ವೇದವತಿ ಅಮ್ಮನಿಗೆಂದೇ ತಂದುಕೊಟ್ಟ ನಾಕಾರು ಹೊಸ ಸೀರೆಗಳನ್ನೇ ಉಟ್ಟಿರಲಿಲ್ಲ. ತಾನು ಗಂಡನಿಗೆ ಡೈವೋರ್ಸ್ ಕೊಟ್ಟು ಒಂಟಿಯಾದಾಗ ಅತ್ತಳು. 'ಗಂಡ ಬಿಟ್ಟ ಹೆಣ್ಣು ಅಂತ ಕರೆಸಿಕೊಳ್ಳಬಾರದವ್ವ' ಎಂದು ಪರಿಪರಿಯಾಗಿ ಹಲುಬಿದಳು. 'ಅಮ್ಮ, ಗಂಡ ನನ್ನನ್ನು ಬಿಟ್ಟಿಲ್ಲ. ಗಂಡನನ್ನು ನಾನು ಬಿಟ್ಟಿದ್ದೀನಿ, ತಿಳಿತಾ?' ಎಂದು ವೇದವತಿ ಸಿಟ್ಟು ತಡೆಯದೇ ಗದರಿಸಿದರೂ 'ಎಲ್ಲ ಒಂದೇ ಮಗಳೆ' ಅಂದು ಬಿಟ್ಟಳು. ಅಪ್ಪ, 'ನನ್ನ ಅನಿಸ್ತದ ವೇದ, ನೀನು ಕೈಬಿಡುವಷ್ಟು ಕೇಡಿಗನಲ್ಲ ನಿನ್ನ ಗಂಡ! ತಪ್ಪು ಮಾಡಿದ್ದಿ ನೀನು' ಎಂದು ಶಾಂತವಾಗಿಯೇ ಹೇಳಿದವರು ಒಮ್ಮೆ, ಆ ಬಗ್ಗೆ ಮತ್ತೆ ಮಾತಾಡಲಿಲ್ಲ! ವೇದವತಿಗೆ ಅಪ್ಪನ ನಿಷ್ಠುರತೆಯ ಅರಿವಿತ್ತು. ಕೂಗಾಡಿ ಎಲ್ಲಿ 'ನನ್ನ ಮುಖ ತೋರ್ಸಬ್ಯಾಡ ಹೋಗು' ಅಂತಾನೆಂದು ಭಯದಿಂದ ತತ್ತರಿಸಿದ್ದಳು. ಆದರೆ, ತನ್ನ ಡೈವೋರ್ಸ್ ಬಗ್ಗೆ ಅವರಿಬ್ಬರು ಬಹುಬೇಗ ಮೌನವಾದದ್ದು ಕಂಡು, ತನ್ನ ಮುಖ ಅವರಿಗೆ ತೋರಿಸಬಾರದು ಅಂದುಕೊಳ್ಳುವಷ್ಟು ನೊಂದಳು. ಈ ಊರಲ್ಲಿ ಇರಬಾರದು ಅನ್ನಿಸಿತು. ಕೆಲ್ಸಕ್ಕೆ ರಾಜೀನಾಮೆ ನೀಡಿ ಕಣ್ಮರೆಯಾಗಬೇಕು ಎಂದು ವೇದವತಿ ತೀವ್ರವಾಗಿ ಚಿಂತೆ ಮಾಡಿದ್ದಳು. ಯಾವುದೂ ಆಗದೆ ಯಥಾಸ್ಥಿತಿಯಲ್ಲಿ ಉಳಿದಳು. ಗಂಡ ಅರವಿಂದ ತನ್ನಿಂದ ದೂರ ಉಳಿದರೂ ಅಪ್ಪ-ಅಮ್ಮನಿಂದ ದೂರ ಉಳಿಯಲಿಲ್ಲ. ಬಂದು ಮಾತಾಡಿಸಿ ಹೋಗುವ ಸಂಬಂಧವನ್ನು ಉಳಿಸಿಕೊಂಡಿದ್ದ. ಇವರೂ ಮಾನ್ಯ ಮಾಡಿದ್ದರು. ಎರಡೂವರೆ ವರ್ಷಗಳ ಹಿಂದೆ ಅಪ್ಪನೂ ತೀರಿಕೊಂಡದ್ದು ವೇದವತಿಗೆ ಸಹಿಸಲು ಆಗಲಿಲ್ಲ. ನಿವೃತ್ತಿ ಹೊಂದಿದ ಮ್ಯಾಲೆ ವರ್ಷ ಕಳೆಯುವುದರಲ್ಲಿ ತೀರಿಕೊಂಡದ್ದು ಊರ ಪರಿಚಿತರಿಗೆಲ್ಲ ಬಲು ಕಾಡಿತ್ತು. ವೇದವತಿ ಅಪ್ಪನ ಚಟುವಟಿಕೆಗಳನ್ನು, ಕ್ರಿಯಾಶೀಲತೆಯನ್ನು ಗಮನಿಸುತ್ತಿದ್ದಳು. ನೇರನುಡಿಯ ಅಪ್ಪ ನಿಷ್ಠುರವಾದಿ! ಆತನಲ್ಲಿ ಅರಾಜಕತೆ ತುಂಬಿತ್ತು. ಇದರಿಂದ ಅಪ್ಪನ ಸಂಪರ್ಕಕ್ಕೆ ಬರುವವರಲ್ಲಿ ತಿರಸ್ಕಾರವೂ ಇತ್ತು! ಮಾನ್ಯತೆ ನೀಡುವವರೂ ಇದ್ದರು. ಅಪ್ಪ ತೀರಿಕೊಂಡ ಮ್ಯಾಲೆಯೇ ಆತನನ್ನು ಇಷ್ಟಪಡುವವರ ಸಂಖ್ಯೆ ಹೆಚ್ಚಾಯಿತು. ನೆನೆದಂತೆ ದುಃಖವೂ ಒತ್ತಿ ಬಂದಿತು...

2

ಮನೆ ಹೊರಗೆ ಗಲಾಟೆಯೇನೂ ಇರಲಿಲ್ಲ. ಮನೆಯೊಳಗೆ ನಿಶ್ಯಬ್ದ ಮಡುಗಟ್ಟಿತ್ತು. ಆದರೆ, ಮನಸ್ಸು ನಿರುಮ್ಮಳವಿರಲಿಲ್ಲ. ಎದಎದಕೋ ಆತಂಕ ಭಯದಿಂದ ನಡುಗುತ್ತಿದ್ದಳು. ಚಡಪಡಿಕೆ ಸಂಕಟವಾದಂತೆ ನಿಟ್ಟುಸಿರು ಬಿಡುವಂತಾಗುತ್ತಿತ್ತು. ಅಮ್ಮ ತೀರಿಕೊಂಡ ಮೇಲೆ ಅಪ್ಪ ಈ ಮನೆಯಲ್ಲಿ ಒಂಟಿಯಾದರು. ಆಗ ಇದೇ ಊರಿನಲ್ಲಿದ್ದು ತನ್ನದೆ